

ಅಲ್ಲಿ ಜ್ಞಾನ ಹೆಚ್ಚುತ್ತೆ ಅಂದವರೆ' – ಹಿಂಗೇ ಬಂದ ಬಂದಾಗೆಲ್ಲಾ ಏನೇನೋ ಹೇಳೋನು, ಇದ್ಯಾವಂತ ಸಿಟಿ ಮನುಷ್ಯ ದೊಡ್ಡೋರ ಸವಾಸ್ಥಾಗಿರೋನು ಅಂತಂದು ಹಟ್ಟಿಜನ ಅವನ ಮಾತ್ನ ಭಯ ಭಕ್ತಿಯಿಂದ್ಲೆ ಕೇಳೋರು. ಊರುಗೋಡ್ರು ಶಾನುಭೋಗ್ರೆ ಅವನಿಗೆ ಸಲಾಮ್ ಹೊಡಿತಾರೆ ಅಂದ ಮ್ಯಾಗೆ ನಮ್ಮಂತೋರ ಪಾಡೇನು?

'ಅವರ ಗುಡಿಯೊಗೆ ನಾವ್ಯಕ್ಲಾ ಹೋಗಾಣು? ನಮ್ದೆ ಗುಡಿ ನಮ್ಮ ದ್ಯಾವ್ರ ಅವಲ್ಲ' ಅಂತಿತ್ತು ಎಂಕಜ್ಜ. 'ಹಂಗಲ್ಲಜ್ಜ ಹಿಂಗಾದ್ರೆ ಸಮಾನತೆ ಬರೋದೆಂಗೆ? ಊರ್ನಾಗೇ ನಾವ್ಯಾರೂ ಕಾಲಿಡಂಗಿಲ್ಲ. ಊರ ಹೊರಗೆ ಗುಡಿ ಇರೋದ್ಕೆಯಾ ನಿಮ್ಮ ತಾವ ಕೆಲಸ ತರೋಂಡವರೆ ಕಣಜ್ಜ. ನಿಮ್ಮದೆ ಆದ ಗುಡಿ ಅವೆ ನಿಜ. ಆದರೆ ಅವರವು ಗುಡಿಗಳಲ್ಲ ದೊಡ್ಡ ದೇವಾಲಯಗಳು. ಅವರ ದೇವಾಲಯದ ದೇವಸ್ಥಾನದ ಒಳಗೆ ನಾವು ಹೋಗೋದ್ಕೆ ಕ್ರಾಂತಿ ಅಂತಾರೆ, ಅದೊಂದು ಪ್ರಗತಿಪರ ಹೆಜ್ಜೆ, ಸಮಾನತೆಯ ಪ್ರತೀಕ' ಅಂತಂದು ಜಗ್ಗಿ ಭಾಷಣ ಬಿಗಿಯತ್ತುಲ್ಲ, ನಮ್ಮ ಹಟ್ಟಿನಾಗೆ ಕಾಲೇಜು ಓದೋ ಹುಡುಗರೆಲ್ಲಾ ಸಿದ್ದೇಶನ ಮಾತಿಗೆ ಕಿವಿಗೊಟ್ಟವು.

'ನಿನ್ನ ಮಾತು ನಿಜ ಕಣಣ್ಣಾ, ಹೋಗಾದೆಯಾ. ಅವರದ್ಯಾವರೇನು ಮ್ಯಾಲಿಂದ ಇಳಿದಾನೇ' ಎಂದು ಜೋರುದನಿ ಮಾಡಿ ಕೂಗಾಡಿಕ್ಕತ್ತಿದವು. 'ಅವರಿಗಿಂತ ನಾವ್ಯಾತ್ರಾಗ್ ಕಮ್ಮಿ? ದುಡ್ಕೊಂಡು ತಿಂತೀವಿ ಮೈಬಗ್ಗಿ. ಇಲ್ಲೇನೋ ನಮಗೆ ಸಪರೇಟಾಗಿ ಕೆಳಹಟ್ಟಿ ಅಂತಂದು ಮಾಡಿ ಊರ್ ಹೋರಾಗೇ ಇಟ್ಟವರೇ ಬದ್ಮಾಸ್ಗಳು. ಪ್ಯಾಟೆನಾಗೆ ಎಲ್ಲಾ ಒಂದೇ ಕಡೆ ಬಾಳ್ತೆಲ್ವಾ? ಹೇಳಿಕೊಂಡ್ರೆಯಾ ಜಾತಿ ಗೊತ್ತಾಗದಲ್ಲೆ? ಅವರಿಗೇನು ಕೊಂಬು ಅದಾವರ' ಎಂದೆಲ್ಲಾ ಹುಡ್ರು ಎಗರಾಡೋಕತ್ತಿದವು.

'ಸಿದ್ದೇಶಣ್ಣಾ, ಹಂಗಾರೆ ಅವರ್ ಗುಡಿನಾಗೆ ಯಾವಾಗ್ಲಣ್ಣಾ ನುಗ್ಗೋದು?', ಬಿಸಿ ಉಸಿರು ಬಿಟ್ಟವು ಹುಡ್ರು.

'ಅಯ್ಯೋ ಹುಚ್ಚ ಸೂಳೆ ಮಕ್ಳಾ, ಇನ್ನು ಗುಡಿನೇ ಆಗಿಲ್ಲೈ, ಗುಡಿ ಒಂದು ಆಗ್ಲಿ. ಅವರು ದೇವರ ಕುಂದ್ರಿಸಿ ಪೂಜಾಗೀಜೆ ಮಾಡ್ಲಿ. ಆಮೇಲೆ ಒಂದಿನ ಅವರಿಗೆ ಹೇಳಿಯೇ ನಾವು ಪ್ರವೇಶ ಮಾಡೋಣ. ಮಿನಿಸ್ಟರ್ನ ಕರೆಸಿ ದೊಡ್ಡ ಸಮಾರಂಭವೇ ಮಾಡೋಣಾ' ಸಿದ್ದೇಶ ಹೈಕಳನ್ನು ಹುರಿದುಂಬಿಸಿದ. ನನಗ್ಯಾಕೋ ಇವನೇನೋ ಕಿತಾಪತಿ ಮಾಡ್ತಿದಾನೆ, ಊರಿನ್ ನೆಮ್ಮದಿ ಹಾಳು ಮಾಡ್ತಿದಾನೇನೋ ಅನ್ನಿಸ್ತು. ಅವನು ಊರಿಗೆ ಬಂದಾಗೆಲ್ಲಾ ಇದೇ ಕಥೆ ಇದೇ ಮಾತು. ಹುಡುಗರದ್ದು ಗುಂಪು ಕಟ್ಟಿಬಿಟ್ಟ ಭೂಪ.

* * *

ಗುಡಿ ಕೆಲಸ ಮುಗೀತು. ಭರ್ಜರಿ ಗೋಪುರ ಕಟ್ಟಿ ಕಳಸಾನೂ ಇಕ್ಕಿದರು. ಬಣ್ಣಾನೂ ಬಳೆದರು. ನಿಂತುಗೊಂಡಗಾತು ಗುಡಿ. ಪೂಜಾ ಹೋಮ ಯಜ್ಞ ಅಂತ ಇಕ್ಕಂಡು ಬಾಂಬ್ರ ಮುಂದಾಳತ್ವದಾಗೆ ಊರಜನವೆಲ್ಲಾ ಗುಡಿಗೋದರು. ದೇವರಿಗೆ ಎಡೆಕೊಟ್ಟರು. ಊರಿಗೇ ಹುಗ್ಗಿ ಹಾಕಿಸಿದರು. ನಮ್ಗು ಗುಡಿಯ ಕಾಂಪೌಂಡಿನಾಚೆ ಬೀದಿನಾಗೆ ಎಲೆ ಹಾಕಿ ಉಣ್ಣಾಕೆ ಇಕ್ಕಿದರು ಬಿಸಿಲ್ನಾಗೆ. ಹುಟ್ಟಿದಾಗಿಂದ ಹುಗ್ಗಿ ಮಕಾನೇ ಕಾಣ್ದವಂಗೆ ನಮ್ಮೋರು ನುಗ್ಗಿದರು. ಮುಕ್ಕಿದ್ರು.

ಮಾರನೇ ದಿನ ಬಂದ ಸಿದ್ದೇಶ ಮತ್ತದೇ ಹಳೀ ಪಾಠ ಊದಿದ 'ಹಳ್ಳಿ ಗೋಡ್ರು ಇರ್ಲಿ, ಹಳ್ಳಿ ಜನ ನಿನ್ನ ಮಾತ್ನ ಒಪ್ಪಿತೇನಣ್ಣಾ ಎಲ್ಲಾರ!?' ಅಂತ ಕಣ್ ಕಣ್ ಬಿಟ್ಟವು ಹಟ್ಟಿ ಹೈಕಳು.

'ನಾನ್ ಮಾತಾಡ್ತಿನೇಳ್ರೋ ಒಪ್ಪಂಗೆ. ನಾನು ನಿಮ್ಮೋನೆ ಅಲ್ವಾ? ಮತ್ತೆ ನನ್ನ ಹಂಗೆ ಹಳ್ಳಿನಾಗೆ ಬಿಟ್ಟಂತಾರೇ? ವಿದ್ಯಾವಂತರಾಗ್ಬೇಕು, ದೊಡ್ಡ ಕೆಲಸದಾಗಿರ್ಬೇಕು, ನಾನ್ ನೋಡು ಸ್ಯಾಸಕಾರ ಪಿ.ಎ. ಅಂತ ಭಯ ಅವಕ್ಕೆ. ನಮ್ಮೇನೆ ಡಿಸಿ ಸಾಹೇಬ್ನಾದ್ರೆ ಇವರು ಸಲಾಮ್ ಹೊಡೆಯಾಕಿಲ್ವಾ? ಊರ್ನಾಗೆ ಬರಬ್ಯಾಡಾ ಅಂತಾರೇನು? ನಿಮಗ್ಯಾಕೆ ಅಂಜಿಕೆ? ನಾನು ಹೋಗಿ ಅವರ್ನಾವ್ ಮಾತಾಡ್ತೀನ್ರಯ್ಯಾ. ಅದ್ಯಾಕೆ ನಮ್ಮನ್ನು ಗುಡಿನಾಗೆ ಬಿಟ್ಕೊಳಲ್ಲ, ದಬಾಯಿಸೋಣಾ', ಅಂತೆಲ್ಲಾ ನಮ್ಮ ಹುಡುಗರ ತಲೆಯಾಗೆ ಹುಳಬಿಟ್ಟು ಹೀರೊ ಆಗೋದ, ಸಿದ್ದೇಶಿ ಹೇಳ್ದಂಗೆಯಾ ಊರೊಳಕ್ಕೆ ಹೋಗಿದ್ದನ್ನು ಹಟ್ಟಿಯಿಂದ್ಲೆ ನಿಂತು ನೋಡಿದೆವು. ಅರ್ಧ ಗಂಟೆಯಾಗೋದ್ರೊಳ್ಗೆ ಹ್ಯಾಪ್ಮೋರೆ ಹಾಕ್ಕೊಂಡು ವಾಪಸ್ ಬಂದ. ಹೈಕಳೆಲ್ಲಾ ಮುತ್ತಿಕ್ಯಂಡ್ರು.

'ಇವರೆಲ್ಲಾ ಮಾತಿಗೆ ಬಗ್ಗುತಾರೆನ್ರಲಾ? ಗುಡಿಯಾಗೆ ಹೆಜ್ಜೆ ಇಟ್ಟು ನೋಡ್ರಿ ನಮ್ಮ ನರಸಿಮ್ಮದ್ರಾವೆ ನಿಮ್ಮಗಳ ಹೊಟ್ಟೆ ಬಗೆದು ಕಳ್ಳುಕಿತ್ತು ಮಾಲೆ ಹಾಕ್ಕಂತಾನೆ ಅಂತ ಹೆದರಿಸಿದರು ಕಣ್ರೋ' ಬಿಸಿಯುಸಿರು ಬಿಟ್ಟ ಸಿದ್ದೇಶ.

'ಹಂಗಾರೆ ನಿನ್ನ ಮಾತಿಗೂ ಕಿಮ್ಮತ್ತು ಕೊಡಲಿಲ್ವಾ? ಮುಂದೆ ಹೆಂಗಣ್ಣಾ?' ಹೈಕಳು ಕೊತಕೊತ ಕುದ್ದವು.

'ಹೆಂಗ್ ಏನ್ ಬಂತ್ರೋ. ಕಾನೂನು ನಮ್ಮ ಕಡೆ ಅದೆ. ನಾಳೆ ಗುಡಿ ಪ್ರವೇಶ ಮಾಡಿಯೇ ಬಿಡೋಣ್ರಯ್ಯ. ಆದ್ದಾಗ್ಲಿ' ಹುರಿದುಂಬಿಸಿದ ಸಿದ್ದೇಶ.

ವಯಸ್ಸಾದ್ದೋರು, ದಿನಗೂಲಿಗೆ ಹೋಗೋರು ಇತ್ತಕಡೆ ತಲೆ ಹಾಕಲಿಲ್ಲ, ಏನಾತೋ ನೋಡೇ ಬಿಡೋಣ ಅಂತಂದು ನಾನು ಸಿದ್ದೇಶಿಗೆ ಸಾಥ್ ಕೊಟ್ಟೆ. ಗುಡಿ ಗಂಟೆಗಳು ಮೊಳಗೋವಾಗ ಸಿದ್ದೇಶಿ ಜೊತೆ ಗುಂಪು ಕಟ್ಟಿಕೊಂಡು ಗುಡಿತಾವ್ಕೆ ಹೋದವಿ. ಗುಡಿನಾಗಿದ್ದೋರೆಲ್ಲಾ ಕಾಂಪೌಂಡ್ ಆಚೆ ಬಂದ್ ಮಹಾದ್ವಾರನಾ ಬಂದೂ ಮಾಡಿ ಕುಸ್ತಿಗೆ ನಿಂತೋರಂಗೆ ನಿಂತರು. ಅವರುಗಳು ಯಾವುದಕ್ಕೂ ಸಿದ್ದರಾಗೇ ಬಂದಂಗಿತ್ತು. ಅವರ್ದೂ ದೊಡ್ಡ ಗುಂಪಿತ್ತು.

'ನಮ್ಗೂ ಗುಡಿನಾಗೆ ಬಿಡ್ರಿ. ದೇವರ ದರ್ಶನ ತಗೊಂಡು ಹೋಗ್ತೀವಿ... ನೀವಿನ್ನ ಯಾವ ಕಾಲದಾಗಿದೀರಾ? ದೇವರ ದೃಷ್ಟಿನಾಗೆ ನಾವೆಲ್ಲಾ ಒಂದೆಯಾ' ಅಂತಂದು ಸಿದ್ದೇಶಿಯು ಗೌಡ್ರ ಶಾನಭೋಗರ ಹಳ್ಳೀ ಜನರ ಮನ ಒಲಿಸಲು ನೋಡ್ದ.

'ಅದೆಲ್ಲಾ ನಡೆಯೋ ಮಾತಲ್ಲ, ಜೀವದ ಮ್ಯಾಗೆ ಆಸೆ ಇದ್ದರೆ ಹೆಂಗೆ ಬಂದ್ರೋ ಹಂಗೆ ಹೊಂಟ್ರೋಗ್ರಿ'